ಅ) ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ 1993-94ರಲ್ಲಿ ಯಾವ ಯಾವ ಭಾಗಗಳಲ್ಲಿ ನೀರಿನ ಹಳೆಯ ಪೈಪುಗಳನ್ನು ಬದಲಾಯಿಸಲಾಗಿದೆ (ಡಿಸೆಂಬರ್ ಅಂತ್ಯದವರೆಗೆ)

ಇ) 1994-95ರಲ್ಲಿ ಬೆಂಗಳೂರಿನಲ್ಲಿರುವ ನೀರಿನ ಹಳೆಯ ಪೈಪುಗಳನ್ನು ಬದಲಾಯಿಸಲು ಸರ್ಕಾರ ಏನಾದರೂ ಯೋಜನೆ ಹಾಕಿಕೊಂಡಿದೆಯೇ?

ಈ) ಹಾಗಿದ್ದಲ್ಲಿ ಅದರ ವಿವರಗಳೇನು?

ಉ) ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿರುವ ನೀರಿನ ಎಲ್ಲ ಹಳೆಯ ಪೈಪುಗಳನ್ನು ಪೂರ್ತಿಯಾಗಿ ಯಾವಾಗ ಬದಲಾಯಿಸಲಾಗುವುದು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ನಗರದ ಎಲ್ಲಾ ಹಳೇ ಬಡಾವಣೆಗಳಲ್ಲಿ ನೀರಿನ ಹಳೆಯ ಪೈಪುಗಳನ್ನು ಬದಲಾಯಿಸಬೇಕಾಗಿದೆ.

ಆ) 1993-94ರಲ್ಲಿ ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರದ ಯಾವುದೇ ಭಾಗದಲ್ಲಿ ಪೈಪುಗಳನ್ನು ಬದಲಾಯಿಸಲಾಗುವುದಿಲ್ಲ.

ಇ) ಹೌದು.

ಈ) ಬೆಂಗಳೂರು . ಜಲಮಂಡಳಿಯು ರೂ. 10.00 ಕೋಟಿ ವೆಚ್ಚದಲ್ಲಿ ನಗರದ ಹಳೆಯ ಭಾಗದಲ್ಲಿಯ ಹಳೆಯ ಪೈಪುಗಳನ್ನು ಬದಲಾಯಿಸಲು ಉದ್ದೇಶಿಸಿದ್ದು, ಈ ಬಗ್ಗೆ ಹುಡ್ಕೋ ನೆರವನ್ನು ಕೋರಿದೆ ಹಾಗೂ ಮೆಗಾ ಸಿಟಿ ಯೋಜನೆಯಲ್ಲಿಯೂ ನೆರವನ್ನು ಕೋರಲು ಉದ್ದೇಶಿಸಿದೆ.

ಉ) ಹಣ ಸಹಾಯ ಬಂದ ಕೂಡಲೇ ಹಳೆಯ ಪೈಪುಗಳನ್ನು ಬದಲಾಯಿಸಲಾಗುವುದು.

ವಿಧಾನಸಭೆಯಲ್ಲಿ ಆಶ್ವಾಸನೆ ನೀಡಿದ ಪ್ರಕಾರ ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಣ್ಣೂರು ಗ್ರಾಮದಲ್ಲಿ ಎಸ್ಸಿ: ಎಸ್ಟಿ ಹಾಸ್ಟೆಲನ್ನು ಪ್ರಾರಂಭಿಸುವ ಬಗ್ಗೆ

134-ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ): ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ವಣ್ಣೂರು ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳ ಅನುಕೂಲತೆಗಾಗಿ ಎಸ್.ಸಿ / ಎಸ್.ಟಿ. ಹಾಸ್ಟೆಲನ್ನು ಪ್ರಾರಂಭಿಸಲು ಸರ್ಕಾರದವರು ಸದನದಲ್ಲಿ ಆಶ್ವಾಸನೆ ನೀಡಿದ ಪ್ರಕಾರ ಯಾವ ಕ್ರಮ ಕೈಗೊಂಡಿರುವುದು?

ಆ) ಹಾಗಿದ್ದಲ್ಲಿ, ಸರ್ಕಾರದವರು ಅಲ್ಲಿ ಇದೇ ವರ್ಷದಲ್ಲಿ ಎಸ್.ಸಿ / ಎಸ್.ಟಿ. ಹಾಸ್ಟೆಲನ್ನು ಆರಂಭಿಸುವರೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) 1994-95ನೇ ಸಾಲಿನಲ್ಲಿ ಆರ್ಥಿಕ ಲಭ್ಯತೆಯನ್ನು ಆಧರಿಸಿ, ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಣ್ಣೂರು ಗ್ರಾಮದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಆ) ಪ್ರಶ್ನೆ (ಅ) ಗೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.